708(1145) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಹಳಷ್ಟು ನಿರೀಕ್ಷಣಾ ಮಂದಿರ ಹಾಗೂ ಪ್ರವಾಸಿ ಮಂದಿರಗಳ ಕೊಠಡಿಗಳು ಸರಿಯಾಗಿ ನಿರ್ವಹಣೆ ಮಾಡದೆ ಇರುವುದರಿಂದ; ಆರೋಗ್ಯಕ್ಕೆ ಹಾನಿ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರ ನಿರ್ವಹಣೆ ಉಸ್ತುವಾರಿ ಅಧಿಕಾರಿಗಳು (ಮೇಟಿ) ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಕೊಠಡಿಗಳನ್ನು ರಿಜಿಸ್ಟರ್‌ನಲ್ಲಿ ನೊಂದಾಯಿಸದೇ ಖಾಸಗಿಯವರಿಗೆ ಅನಧಿಕೃತವಾಗಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ರೀತಿ ಅನಧಿಕೃತವಾಗಿ ವಾಸಿಸುತ್ತಿರುವುದರಿಂದ ಸರ್ಕಾರಕ್ಕೆ ನಷ್ಟ ಉಂಟಾಗಲು ಮುಖ್ಯ ಕಾರಣವಾಗುತ್ತದೆ? ಇದರಿಂದ ಕೊಠಡಿಗಳು ಅವ್ಯವಸ್ಥೆಯಲ್ಲಿರುವುದು ವಾಸ್ತವವಲ್ಲವೇ?

ಇ) ಸದರಿ ಸಂಕೀರ್ಣಗಳನ್ನು ಶುಚಿತ್ವವಾಗಿ ಇಡುವುದರಿಂದ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ, ಬಂದರು ಮತ್ತು ಇಂಧನ ಸಚಿವರು):

ಅ) ಇಲ್ಲ.

ಆ) ಇಲ್ಲ

ಉದ್ಭವಿಸುವುದಿಲ್ಲ.

ಇ) ಅನುದಾನದ ಲಭ್ಯತೆಯನ್ನು ಆಧರಿಸಿ ನಿರೀಕ್ಷಣಾ ಮಂದಿರ ಹಾಗೂ ಪ್ರವಾಸಿ ಮಂದಿರಗಳ ಕೊಠಡಿಗಳನ್ನು ಹಾಗೂ ಆವರಣಗಳನ್ನು ಶುಚಿತ್ವವಾಗಿ ಇಡಲು ಕ್ರಮ ಕೈಗೊಳ್ಳಲಾಗುತ್ತಿದೆ.

709(1146) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

A) Whether the Government is aware that National and State Highways that connects to Bangalore city witness wayward parking of heavy vehicles resulting traffic movement to a stand still?

B) If so, number of cases are booked against these traffic offenders for the last one year?